ಪ್ರಕಾಶನ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ.) ಆತ ನನ್ನ ಜೋಡಿದಾರ್ ಆಗಿಬಿಟ್ಟ. ನನ್ನ ಪುಸ್ತಕಗಳ ಪ್ರಕಟಣೆಯ ಜೊತೆಗಾರ ಆಗಿಬಿಟ್ಟ. ನನಗೆ ಬಹುತೇಕ ನಿಗದಿತ ಪುಸ್ತಕವೊಂದರ ಬರವಣಿಗೆಯ ಜವಾಬ್ದಾರಿಯನ್ನು ಯಾರೂ ವಹಿಸಿಲ್ಲ; ಒಮ್ಮೆ ಮಾತ್ರ ಸಿನಿತಾರೆ ಹೆಲನ್ ಕೃತಿಯ ಜವಾಬ್ದಾರಿ ಬಂದಿತ್ತು. 'ಹೆಲನ್ ಕುರಿತು ಯಾರು ಪುಸ್ತಕ ಬರೆಯುತ್ತೀರಿ?' ಎಂದಾಗ ನಾನು ಅದನ್ನು ಒಪ್ಪಿಕೊಂಡುಬಿಟ್ಟೆ. ನಾನು ಪತ್ರಕರ್ತನೂ ಆಗಿರುವುದರಿಂದ ಕೆಲವೊಮ್ಮೆ ಅಂಕಣ ಬರೆಯುವ, ಸಂಪಾದಕೀಯ ಬರೆಯುವ ಜವಾಬ್ದಾರಿ ಬರುತ್ತದೆ. ಆಗ ಒಂದು ಸಾಂಪ್ರದಾಯಿಕ ಧ್ವನಿಯಲ್ಲಿ, ಕೆಲವು ನಿಯಮಗಳನ್ನು ಅನುಸರಿಸಿ ಲೇಖನ ಬರೆಯಬೇಕಾಗುತ್ತದೆ. ನನಗೆ ಯಾವತ್ತೂ ರವಿ ನನ್ನ ಹಸ್ತಪ್ರತಿ ಓದಿ 'ಎಸ್' ಅಥವಾ 'ನೋ' ಎಂದು ಹೇಳುತ್ತಾನೆ ಎನ್ನುವ ಧೈರ್ಯವಿತ್ತು. ಕೆಲವೊಮ್ಮೆ ಇಷ್ಟಪಟ್ಟರೆ, ಕೆಲವೊಮ್ಮೆ ಉಪಯೋಗಕ್ಕೆ ಬರಲ್ಲ ಎಂದು ಹೇಳಿಬಿಡುತ್ತಿದ್ದ. ನಿರಾಕರಿಸಿದಾಗ ನಂಗೆ ಸಿಕ್ಕಾಪಟ್ಟೆ ಸಿಟ್ಟು ಬರುತ್ತಿತ್ತು, ದುಃಖವಾಗುತ್ತಿತ್ತು. ನಾನೆಷ್ಟು ಪರಿಶ್ರಮ ಹಾಕಿದ್ದೇನೆ ಮತ್ತು ಜಾಗ್ರತೆ ವಹಿಸಿದ್ದೇನೆ ಎಂದು ಅವನಿಗೆ ಗೊತ್ತಿಲ್ಲ ಅಂತ ಅನ್ನಿಸೋದು.

◆ **ಈಗಲೂ ಹಾಗನ್ನಿಸುತ್ತಾ?**

ಹೌದು, ಹೌದು. ಸ್ವಲ್ಪ ದಿನದ ನಂತರ ಸಮಾಧಾನ ಆಗುತ್ತೆ. ರವಿ ನನ್ನ ಒಳ್ಳೆ ಸ್ನೇಹಿತ. ಈ ನಿರಾಕರಣೆಯೂ ಒಳ್ಳೆಯ ಓದುಗನಿಂದ ಬರುತ್ತಿದೆ. ನಾನು ಆಗೊಮ್ಮೆ ಈಗೊಮ್ಮೆ ಕೆಟ್ಟ ಬರವಣಿಗೆ ಮಾಡಿರುವ ಸಾಧ್ಯತೆಯೂ ಇದೆ ಅಂತ ಒಪ್ಪಿಕೊಳ್ಳುತ್ತೇನೆ.

(ಒಬ್ಬ ಯುವ ಅಭಿಮಾನಿ ಬಂದು ಪುಸ್ತಕಕ್ಕೆ ಹಸ್ತಾಕ್ಷರ ಹಾಕಿಸಿಕೊಂಡ. ಅವನ ಅಡ್ಡಹೆಸರು 'ಕಿತ್ತಾನೆ' ಎಂದಿತ್ತು. 'ಹಂಗಂದರೆ ಏನು?' ಎಂದು ಜೆರ್ರಿ ಕುತೂಹಲದಿಂದ ಕೇಳಿದರು. 'ಅದು ನಾನು ಹುಟ್ಟಿ ಬೆಳೆದ ಊರು' ಎಂದು ಅಭಿಮಾನಿ ಉತ್ತರಿಸಿದ. 'ಅದು ಸರಿ. ಆದರೆ ಆ ಊರಿನ ಹೆಸರಿಗೆ ಏನರ್ಥ?' ಎಂದು ಕುತೂಹಲದಿಂದ ವಿಚಾರಿಸಿದರು. ಅವನಿಗೆ ಗೊತ್ತಿರಲಿಲ್ಲ. 'ನಿಮ್ಮಪ್ಪನ ಹತ್ತಿರ ಹೋಗಿ ಕೇಳು. ಇದೆಲ್ಲಾ ಬಹಳ ಮುಖ್ಯ' ಎಂದು ಬುದ್ಧಿ ಹೇಳಿದರು.



'ಬಹುಶಃ ಆನೆಗೆ ಸಂಬಂಧಿಸಿದ ಊರು ಇರಬೇಕು' ಎಂದು ನಾನು ಊಹಿಸಿ ಹೇಳಿದೆ. ಜೆರ್ರಿ ಅದನ್ನು ಕೇಳಿ ಸಂಭ್ರಮಪಟ್ಟು 'ನಿಮ್ಮೂರಿಗೆ ಎಷ್ಟೊಳ್ಳೆ ಹೆಸರಿದೆ. ಮೊದಲು ಅದರ ಬಗ್ಗೆ ವಿಚಾರಿಸು' ಎಂದು ತಿಳಿಹೇಳಿದರು.)

◆ **ನೀವು ಮುಂಬಯಿಯಲ್ಲೇ ಹುಟ್ಟಿ ಬೆಳೆದವರು. ಆದ್ದರಿಂದ ನಿಮ್ಮ ಬರವಣಿಗೆಯಲ್ಲಿ ಮುಂಬಯಿ ಆವರಿಸಿಕೊಂಡು ಬಂದಿದೆ. ಕಾದಂಬರಿಯಾಗಲಿ, ಕವಿತೆಗಳಾಗಲಿ, ಕೊನೆಗೆ ಜೀವನ ಚರಿತ್ರೆ ಬರೆದರೂ ಮುಂಬಯಿಯ ಬಾಲಿವುಡ್ ತಾರೆಯರನ್ನು ಆರಿಸಿಕೊಂಡಿದ್ದೀರಿ. ಈ ನಗರ ಯಾವತ್ತಾದರೂ ನಿಮ್ಮ ಸಾಹಿತ್ಯ ಸೃಷ್ಟಿಗೆ ತಡೆಗೋಡೆಯಾಗಿದೆ ಎನ್ನಿಸಿದೆಯಾ?**

ಯಾವಾಗಲೂ... ಯಾವಾಗಲೂ. ನಾನೀಗ ಮೈಸೂರಿಗೆ ಬಂದಿದ್ದೇನೆ. ನಾನು ನೋಡುವ ಮೇಲ್ಪದರದ ಮೈಸೂರಿನ ಕೆಳಗೆ ಲಕ್ಷಾಂತರ ಕತೆಗಳಿವೆ. ಆ ಕತೆಗಳನ್ನು ನಾನು ಹೇಳಲಾರೆ. ಮೈಸೂರಿನವರೇ ಯಾರಾದರೂ ಹೇಳಬೇಕು. ಯಾಕೆಂದರೆ ಈ ನಗರ ಅವರದು, ಅವರು ಪ್ರೀತಿಸುವ ಸ್ಥಳ, ಅವರಿಗೆ ಅರ್ಥವಾಗಿರುವ ನಗರ. ಹೆಚ್ಚಿನ ಶ್ರಮವಿಲ್ಲದೆ